FirstRanker.com
Firstranker's choice
www.FirstRanker.com www.FirstRanker.com

This Question Paper consists of 31 questions and 8 printed pages.

Roll No.
ರೋಲ್ ನಂ. | | | | | | | | | | | | |

Code No. **51/S/O/K**

# KANNADA
## (ಕನ್ನಡ)
## (208)

Set **A**

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ____________________

Signature of Invigilators 1. ____________________

ಉಸ್ತುವಾರಿದಾರರ ರುಜು
2. ____________________

**ಸಾಮಾನ್ಯ ಸೂಚನೆಗಳು :**

1. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.
2. ನಿಮಗೆ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಎಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.
3. ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.
4. ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.
5. ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್‌ಅನ್ನು ಬರೆಯಕೂಡದು. ಒಂದು ವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನೂರ್ಜಿತಗೊಳಿಸಲಾಗುವುದು.
6. ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ **51/S/O/K** ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

# KANNADA

## (ಕನ್ನಡ)
## (208)

**ಸಮಯ : 3 ಗಂಟೆಗಳು]** **[ಗರಿಷ್ಠ ಅಂಕ : 100**

**ಸೂಚನೆಗಳು :** (1) ಎಲ್ಲಾ ಪ್ರಶ್ನೆಗಳಿಗೆ ಉತ್ತರಗಳನ್ನು ಉತ್ತರ ಪುಸ್ತಕದಲ್ಲಿ ಬರೆಯಿರಿ.
(2) ಪ್ರಶ್ನೆ ಮತ್ತು ಉಪ–ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

ಪ್ರಶ್ನೆ 1 ರಿಂದ 11 ರವರೆಗೆ 4 ಆಯ್ಕೆಗಳನ್ನು ಕೊಡಲಾಗಿದೆ. ಅತ್ಯಂತ ಸೂಕ್ತವಾದುದನ್ನು ಆಯ್ಕೆಮಾಡಿ ಉತ್ತರಿಸಿರಿ.

**1.** ಅತಂತ್ರ – ಈ ಪದದ ಸಮಾನಾರ್ಥ_________. 1

(A) ಸ್ವತಂತ್ರ (B) ರಾಜತಂತ್ರ
(C) ಅಸ್ಥಿರತೆ (D) ಪಾರತಂತ್ರ

**2.** ಕನ್ನಡದ ಆಸ್ತಿ ಎಂದು ಪ್ರಸಿದ್ಧರಾದವರು : 1

(A) ಬೇಂದ್ರೆ (B) ಕುವೆಂಪು
(C) ಸಿದ್ದಲಿಂಗಯ್ಯ (D) ವೆಂಕಟೇಶ ಅಯ್ಯಂಗಾರ್

**3.** ಮತದ ಬಿರುಕುಗಳನು _________. 1

(A) ತೊರೆವೆ (B) ಮರೆವೆ
(C) ಬಿರಿವೆ (D) ಪಡೆವೆ

**4.** ಕಿವಿಗೆ ಬೇಸರವಾಗಿ _________ ಅಟ್ಟಿಸಿಕೊಂಡು ಹೋಗುತ್ತಿತ್ತು. 1

(A) ಅಳಿಲನ್ನು (B) ನಾಯಿಯನ್ನು
(C) ಜಿಂಕೆಯನ್ನು (D) ಬೆಕ್ಕನ್ನು

**5.** 'ಮಾತ್ನಾಡುವ ಅಡಿಕೆ ನೆಗಾಡುವ ಎಲೆ' ಇದು _________. 1

(A) ದಂತಕಥೆ (B) ಕಟ್ಟುಕಥೆ
(C) ಜಾನಪದ ಕಥೆ (D) ಚಿತ್ರಕಥೆ



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

6. ನಂಬಿಕೆಯಲ್ಲಿ ದುಡಿಯುವವನು ________. 1

(A) ತಮ್ಮಣ್ಣ (B) ಬಸವಣ್ಣ

(C) ಜಂಬಣ್ಣ (D) ರಂಗಣ್ಣ

7. ಶಾಲುಸಾಬಿ ಊರಿನವರ ಪಾಲಿಗೆ ________. 1

(A) ಹಾಸ್ಯಗಾರ (B) ಕಥೆಗಾರ

(C) ಹಾಡುಗಾರ (D) ಧರ್ಮಾವತಾರ

8. ಅಲರ್ಜಿ ನಿರೋಧಕ ಮಾತ್ರೆ ತಿಂದಾಗ ________ ಬರುತ್ತದೆ. 1

(A) ನಿದ್ರೆ (B) ನಗು

(C) ಕನಸು (D) ಬೇಸರ

9. ಕಾಗೆ ಕೋಳಿಗಿಂತ ಕಡೆಕಷ್ಟ ________. 1

(A) ಭಕ್ತಿ ಇಲ್ಲದಿದ್ದರೆ (B) ಊಟವಿಲ್ಲದಿದ್ದರೆ

(C) ನೋಟವಿಲ್ಲದಿದ್ದರೆ (D) ಆಟವಿಲ್ಲದಿದ್ದರೆ

10. ಮಾದೇಶ್ವರರು ಮಂತ್ರಿಸಿ ಕೊಟ್ಟದ್ದು ________. 1

(A) ಕಾವಿ (B) ನೀರು

(C) ವಿಭೂತಿ (D) ಕುಂಕುಮ

11. ವೈಚಾರಿಕ ಪ್ರಜ್ಞೆಗೆ ಇರುವ ಅಡೆತಡೆಗಳು ________. 1

(A) ಸಂಶೋಧನೆ (B) ಯೋಜನೆ

(C) ಆಲೋಚನೆ (D) ಮೂಢನಂಬಿಕೆಗಳು



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

12. ಕೆಳಗೆ ಕೊಟ್ಟ ಗದ್ಯಭಾಗವನ್ನು ಓದಿಕೊಂಡು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸಿರಿ :

ಎಲ್ಲಾ ಜೀವಿಗಳಲ್ಲಿ ಕೇವಲ ಮನುಷ್ಯರಿಗೆ ಪರಮಾತ್ಮನು ಅಪಾರವಾದ ಬುದ್ಧಿಶಕ್ತಿ, ಮಾತನಾಡುವ ಶಕ್ತಿ, ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯುವ ಶಕ್ತಿ, ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಟ್ಟು ತನ್ನನ್ನು ತಾನೇ ತಿದ್ದಿಕೊಳ್ಳುವ ಶಕ್ತಿ, ಧರ್ಮದ ನಿಯಮಗಳನ್ನು ರೂಪಿಸುವ ಶಕ್ತಿ, ಅದಕ್ಕನುಗುಣವಾಗಿ ನಡೆಯುವ ಪ್ರವೃತ್ತಿ ಇವೆಲ್ಲವನ್ನೂ ದಯಪಾಲಿಸಿದ್ದಾನೆ. ಈ ಶಕ್ತಿಗಳ ಸದುಪಯೋಗದಿಂದ ಮನುಷ್ಯ ಮಾನವನಾಗುತ್ತಾನೆ. ಆದರೆ ಮನುಷ್ಯನಲ್ಲಿ ಅಂತರ್ನಿಹಿತವಾಗಿರುವ ಆರು ಶತ್ರುಗಳನ್ನು ಪರಮಾತ್ಮನು ಸ್ಥಾಪಿಸಿದ್ದಾನೆ. ಅವೇ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯವೆಂಬ ಗುಣಗಳು. ದೈವದತ್ತ ಶಕ್ತಿಗಳ ಸದುಪಯೋಗ ಮಾಡಿಕೊಳ್ಳಲು ಅಂತರ್ಗತವಾಗಿರುವ ಆರು ಶತ್ರುಗಳ ನಿಯಂತ್ರಣ ಅತ್ಯಗತ್ಯ. ಇದು ಸುಲಭ ಸಾಧ್ಯವಾದ ಕೆಲಸವಲ್ಲ. ಆದರೆ ಇಂದ್ರಿಯಗಳ ನಿಗ್ರಹದಿಂದ ಅವುಗಳ ಸದುಪಯೋಗಮಾಡಿ ಮಾನವನಾಗಬಹುದು, ದೈವತ್ವವನ್ನು ಪಡೆಯಬಹುದು.

**ಪ್ರಶ್ನೆಗಳು :**

**(1)** ಮಾಡಿದ ತಪ್ಪಿಗೆ ಪಡುವಂಥದ್ದು ________. 1

(A) ಕೋಪ–ತಾಪ (B) ಪಶ್ಚಾತ್ತಾಪ

(C) ಸೇಡಿನ–ತಾಪ (D) ಬೇಸಿಗೆ–ತಾಪ

**(2)** ಅಪಾರವಾದ ಬುದ್ಧಿಶಕ್ತಿಯನ್ನು ಯಾರಿಗೆ ಕೊಡಲಾಗಿದೆ ? 1

(A) ಪ್ರಾಣಿಗೆ (B) ದೇವತೆಗೆ

(C) ಮನುಷ್ಯರಿಗೆ (D) ಪಕ್ಷಿಗಳಿಗೆ

**(3)** ತನ್ನನ್ನು ತಾನೇ ತಿದ್ದಿಕೊಳ್ಳುವ ಶಕ್ತಿ ಯಾರಿಗಿದೆ ? 1

**(4)** ಆರು ಶತ್ರುಗಳು ಯಾವುವು ? 2

**(5)** ಯಾವ ನಿಯಂತ್ರಣ ಅತ್ಯಗತ್ಯ ? 2

**(6)** ಮಾತನಾಡುವ ಶಕ್ತಿಯನ್ನು ಯಾರು ಕೊಟ್ಟರು ? 1

**(7)** ಯಾವುದು ಸುಲಭ ಸಾಧ್ಯವಾದ ಕೆಲಸವಲ್ಲ ? 2

**(8)** ದೈವತ್ವವನ್ನು ಪಡೆಯುವುದು ಹೇಗೆ ? 2

**(9)** 'ನಿಯಂತ್ರಣ' ಈ ಪದವನ್ನು ನಿಮ್ಮ ವಾಕ್ಯದಲ್ಲಿ ಬಳಸಿರಿ. 1



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

13. ಕೊಟ್ಟಿರುವ ಪದ್ಯವನ್ನು ಓದಿರಿ. ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

ಮಕ್ಕಳು ಬಂದೆವು ಮುದದಿಂದ
ಗುರುಗಳು ಹಿರಿಯರು ಹಿಂದಿಂದ
ಬಗೆಬಗೆ ಸಸಿಗಳ ಕೈಯಲಿ ಹಿಡಿದು
ಊರನು ಸುತ್ತಿ ಬಂದೆವು ನಡೆದು
ವನಮಹೋತ್ಸವ ಆಚರಿಸಿ
ಸಸಿಗಳ ನೆಡುವುದು ಬಹಳ ಖುಷಿ
ಗಿಡದಲಿ ಅಡಗಿದೆ ತಾಕತ್ತು
ಗಿಡವೇ ನಾಡಿನ ಸಂಪತ್ತು
ಗಿಡಗಳ ಬಳಗವ ಬೆಳೆಸುವೆವು
ನಾಡಿನ ಸೊಬಗನು ಉಳಿಸುವೆವು
ಗಿಡಗಳು ಬೆಳೆವವು ಎತ್ತರಕೆ
ಮಳೆಯನು ತರುವವು ಒಣನೆಲಕೆ

(1) ಯಾವುದು ಬಹಳ ಖುಷಿ ನೀಡುತ್ತದೆ ? 1

(A) ಆಡುವುದು
(B) ಊಟ ಮಾಡುವುದು
(C) ಸಸಿಗಳ ನೆಡುವುದು
(D) ಗಿಡಗಳ ಹತ್ತುವುದು

(2) ಮಕ್ಕಳು ಬಂದೆವು ಮುದದಿಂದ 1
ಮಕ್ಕಳು – ಇದರ ಏಕವಚನ ರೂಪ :

(3) ಗಿಡಗಳ ಬಳಗವ ಬೆಳೆಸುವೆವು 2
ಗಿಡಗಳಿಂದ ಆಗುವ ಲಾಭವೇನು ?
ಒಂದೆರಡು ವಾಕ್ಯಗಳಲ್ಲಿ ಬರೆಯಿರಿ.

(4) 'ಬಗೆ–ಬಗೆ' 2
ಈ ಮೇಲಿನ ದ್ವಿರುಕ್ತಿಯಂತೆ ಇನ್ನೆರಡು ದ್ವಿರುಕ್ತಿಗಳನ್ನು ಬರೆಯಿರಿ.

14. ಸಕಲಕುಲದ ತಾಯಿಯಾರು ? 1

15. ಅಹಿಂಸೆಯ ಪಾಠ ಗಾಂಧೀಜಿಯವರಿಗೆ ಯಾರಿಂದ ದೊರೆಯಿತು ? 1

16. ಲೇಖಕರಿಗೆ ಪರಮ ಶತ್ರು ಯಾವುದು ? 1

17. ಗರತಿ ಎದ್ದು ಯಾರನ್ನು ನೆನೆಯುತ್ತಾಳೆ ? 1

18. (A) ಕಥಾನಾಯಕನ ಮಹತ್ವಾಕಾಂಕ್ಷೆ ಏನು ? 1
(B) ಶಾಂತಿ, ಸೀತೆ, ವಿಜಯ, ಭಟ್ಟ – ಇಲ್ಲಿ ಗುಂಪಿಗೆ ಸೇರದ ಪದ : 1



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

19. ಕೆಳಗಿನವುಗಳಿಗೆ ಉತ್ತರಿಸಿರಿ :

(A) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಬಿಡಿಸಿ ಬರೆಯಿರಿ. 2

(1) ಆಟೋಟ

(2) ಕಾರ್ಮೋಡ

(3) ಹೆಬ್ಬಂಡೆ

**ಅಥವಾ**

'ಇಗ' ಪ್ರತ್ಯಯ ಸೇರಿಸಿ 2 ಶಬ್ದ ಮಾಡಿರಿ.

(B) ಇಲ್ಲಿರುವ ಪದಗಳಲ್ಲಿ ಯಾವುದಾದರೂ ಎರಡನ್ನು ಕೂಡಿಸಿ ಬರೆಯಿರಿ. 2

(1) ಅತಿ + ಅಂತ

(2) ಪ್ರತಿ + ಉತ್ತರ

(3) ಅವನು + ಇಂದ

**ಅಥವಾ**

'ಗಾರ' ಪ್ರತ್ಯಯಕ್ಕೆ ಸಂಬಂಧಿಸಿದಂತೆ – ಎರಡು ಶಬ್ದ ಬರೆಯಿರಿ.

(C) ಕೆಳಗೆ ಕೊಟ್ಟಿರುವ ಶಬ್ದಗಳಲ್ಲಿ ಯಾವುದಾದರೂ ಎರಡಕ್ಕೆ ಒಂದೊಂದು ವಿರುದ್ಧ ಪದ ಬರೆಯಿರಿ. 2

(1) ಮೇಲೆ

(2) ರಾತ್ರಿ

(3) ಸಮಯ

**ಅಥವಾ**

ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದಿರುವ ಶಬ್ದಕ್ಕೆ ಸಮಾನಾರ್ಥಕ ಪದ ಬರೆಯಿರಿ.

(1) ಹೆಣ್ಣು ಮಕ್ಕಳ ಮನಸ್ಸನ್ನು ನೋಯಿಸಬಾರದು

(2) ದೇವರಿಗೆ ಭಯ ಪಡಬೇಕು

20. ಕೆಳಗೆ ಕೊಟ್ಟಿರುವ ನುಡಿಗಟ್ಟುಗಳಲ್ಲಿ ಯಾವುದಾದರೂ ಎರಡನ್ನು ನಿಮ್ಮ ವಾಕ್ಯಗಳಲ್ಲಿ ಪ್ರಯೋಗಿಸಿರಿ. 2

(1) ಕಾಲಿಗೆ ಬುದ್ಧಿಹೇಳು

(2) ನಾಮಹಾಕು

(3) ಕಣ್ಣೀರು ಸುರಿಸು

21. 'ಕೈಗನ್ನಡಿ' ಈ ಪದವು ಯಾವ ಸಂಧಿಯ ನಿಯಮದಲ್ಲಿ ಬರುತ್ತದೆ ? 1

22. ಕಥಾನಾಯಕಿ ಶಾಂತಿಯ ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ. 4

23. ಭವಿಷ್ಯದಲ್ಲಿ ಕಂಪ್ಯೂಟರ್‌ನ ಸಾಧ್ಯತೆಗಳನ್ನು ತಿಳಿಸಿರಿ. 5

24. ಕವಿ ಡಾ॥ ಸಿದ್ದಲಿಂಗಯ್ಯ ಅವರು ಶ್ರಮಿಕ ವರ್ಗದವರ ಕಷ್ಟಮಯ ಬದುಕನ್ನು ಹೇಗೆ ಚಿತ್ರಿಸಿದ್ದಾರೆ ? 5

**ಅಥವಾ**

ಹುಯೆನ್–ತ್ಸಾಂಗ್‌ನ ಬಾಲ್ಯ ಜೀವನವನ್ನು ಕುರಿತು ಬರೆಯಿರಿ.



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

25. ಕೆಳಗಿರುವ ಜೋಡು–ನುಡಿಗಳಲ್ಲಿ ಯಾವುದಾದರೂ **ಎರಡಕ್ಕೆ** ಅರ್ಥಪೂರ್ಣವಾದ ವಾಕ್ಯಗಳನ್ನು ರಚಿಸಿರಿ. **2+2=4**

(A) ಸುತ್ತ – ಮುತ್ತ

(B) ಸುಖ – ದುಃಖ

(C) ಕಪ್ಪು – ಕಾರ್ಪಣ್ಯ

26. ಗುಲ್ಬರ್ಗಾ ವಿಶ್ವವಿದ್ಯಾಲಯ, ಇಲ್ಲಿ ದಾಖಲಾದ ಅಧ್ಯಯನ ಕೇಂದ್ರಗಳ ಸಂಖ್ಯೆಯನ್ನು ಕೊಡಲಾಗಿದೆ. ಅದರ ಸಹಾಯದಿಂದ ರೇಖಾ ಚಿತ್ರವನ್ನು ರಚಿಸಿರಿ. **5**

| ವರ್ಷ | 1977 | 1978 | 1979 | 1980 | 1981 | 1982 | 1983 | 1984 | 1985 | 1986 |
|---|---|---|---|---|---|---|---|---|---|---|
| ಅಧ್ಯಯನ ಕೇಂದ್ರಗಳು | 8 | 9 | 12 | 13 | 14 | 18 | 25 | 27 | 38 | 48 |

**ಅಥವಾ**

ನೀವು ರಮೇಶ ತಂದೆ ವೀರಣ್ಣ, ಊರು–ಬಾಗಲಕೋಟೆ ಎಂ.ಬಿ.ಎ. ಪದವೀಧರರು ಎಂದು ಭಾವಿಸಿ ಕೆಳಗಿನ ಅರ್ಜಿಯನ್ನು ಭರ್ತಿಮಾಡಿರಿ.

**ಉದ್ಯೋಗಕ್ಕಾಗಿ ಅರ್ಜಿ**

ಗೆ,
ಮ್ಯಾನೇಜಿಂಗ್ ಡೈರೆಕ್ಟರ್
ಇನ್‌ಫೋಸಿಸ್ ಕಂಪನಿ
ಮೈಸೂರು.

ಉದ್ಯೋಗದ ಹೆಸರು – ಮ್ಯಾನೇಜರ್

ಹೆಸರು :
ತಂದೆ :
ಜನ್ಮಸ್ಥಳ :
ಹುಟ್ಟಿದ ದಿನಾಂಕ :
ಪೂರ್ಣ ವಿಳಾಸ :
ರಾಷ್ಟ್ರೀಯತೆ :
ಮತ/ಜಾತಿ :
ವಿದ್ಯಾರ್ಹತೆ :
ಅನುಭವ :
ಓದಿದ ಶಾಲೆಯಿಂದ ದೃಢೀಕರಣ ಪತ್ರ :
ಬ್ಯಾಂಕ್/ಅಂಚೆ ಕಛೇರಿಯ ಹೆಸರು :
ಖರೀದಿಸಿದ ಡಿ.ಡಿ./ಪಿ.ಓ.ನಂ :

ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಸರ್ಟಿಫಿಕೇಟುಗಳನ್ನು ಲಗತ್ತಿಸಿದ್ದೇನೆ. ನಾನು ಸಲ್ಲಿಸುತ್ತಿರುವ ಅರ್ಜಿಯಲ್ಲಿನ ಎಲ್ಲಾ ವಿಚಾರಗಳು ಸತ್ಯವಾಗಿವೆ ಎಂದು ಪ್ರಮಾಣೀಕರಿಸುತ್ತೇನೆ.

ಧನ್ಯವಾದಗಳು

ತಮ್ಮ ವಿಧೇಯ
ಹಸ್ತಾಕ್ಷರ
(ಹೆಸರು)



FirstRanker.com
Firstranker's choice
www.FirstRanker.com

FirstRanker.com
Firstranker's choice
www.FirstRanker.com www.FirstRanker.com

27. ರಾವಣನ ಪಾತ್ರವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ. 5

28. ಕೆಳಗಿನ ವಾಕ್ಯಗಳನ್ನು ಓದಿ, ಸೂಚಿಸಿರುವಂತೆ ಬರೆಯಿರಿ. 1x5=5

(1) ಪತಿ ದಿನ ವಾಯಾಮ ಮಾಡುವದ ಉತಮ.
(ಶುದ್ಧರೂಪದಲ್ಲಿ ಬರೆಯಿರಿ)

(2) ಸಹೋದರರು ಒಂದಾಗಿ ಜೀವಿಸಬೇಕು : ಸಹೋದರರು ಇದರ ಏಕವಚನ ರೂಪ __________

(3) ತಿಂಡಿ–ತಿನಿಸು : ಜೋಡಿಪದ : : ಊರೂರು : __________

(4) ಅಬ್ಬಾ ಗೋಳಗುಮ್ಮಟ ಎಷ್ಟೊಂದು ಅದ್ಭುತ ...
(ಇಲ್ಲಿ ಇರಬೇಕಾದ ಲೇಖನ ಚಿಹ್ನೆಗಳು)

(5) ರಾಮನಿಂದ ರಾವಣನು ಹತನಾಗುವನು.
(ಇದನ್ನು ಭೂತಕಾಲಕ್ಕೆ ಪರಿವರ್ತಿಸಿರಿ)

29. ಡಾ|| ಗುರುರಾಜ ಕರ್ಜಗಿಯವರು ಬರೆದ "ಕರುಣಾಳು ಬಾ ಬೆಳಕೆ" ಪುಸ್ತಕವನ್ನು ಕಳುಹಿಸಿಕೊಡುವಂತೆ ಕೋರಿ ವ್ಯವಸ್ಥಾಪಕರು, ಸ್ವಪ್ನ ಪುಸ್ತಕಾಲಯ ಮೈಸೂರು ಇವರಿಗೆ ಒಂದು ಪತ್ರ ಬರೆಯಿರಿ. 7

**ಅಥವಾ**

ಚಾಮರಾಜನಗರದಲ್ಲಿರುವ ಸರ್ಕಾರಿ ಶಾಲೆಯೊಂದರಲ್ಲಿ 10 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ರಾಜೇಶ/ಶ್ರುತಿ ಎಂದು ಭಾವಿಸಿ, ಬಿಜಾಪುರದ ಇಬ್ರಾಹಿಂ ಪುರ ಗಲ್ಲಿಯಲ್ಲಿ ವಾಸಿಸುತ್ತಿರುವ ನಿಮ್ಮ ಗೆಳೆಯ/ತಿ, ದಿನೇಶ/ಕವಿತಾ ಇವರಿಗೆ ನಿಮ್ಮ 16ನೇ ಹುಟ್ಟು ಹಬ್ಬಕ್ಕೆ ಆಮಂತ್ರಿಸುತ್ತಾ ಒಂದು ಪತ್ರ ಬರೆಯಿರಿ.

30. ಈ ಕೆಳಗಿನ ಗಾದೆಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು **50** ಶಬ್ದಗಳಿಗೆ ಮೀರದಂತೆ ಬರೆಯಿರಿ. 5

(1) ಮಾತು ಬೆಳ್ಳಿ; ಮೌನ ಬಂಗಾರ
(2) ಶಕ್ತಿಗಿಂತ ಯುಕ್ತಿ ಮೇಲು
(3) ತುಂಬಿದ ಕೊಡ ತುಳುಕುವುದಿಲ್ಲ

31. ಈ ಕೆಳಗಿನ ವಿಷಯಗಳಲ್ಲಿ ಯಾವುದಾದರೂ **ಒಂದನ್ನು** ಕುರಿತು **200** ಶಬ್ದಗಳಿಗೆ ಮೀರದಂತೆ ಪ್ರಬಂಧವನ್ನು ಬರೆಯಿರಿ. 10

(1) ಚುನಾವಣೆಗಳು
(2) ಭ್ರಷ್ಟಾಚಾರ ನಿರ್ಮೂಲನೆ
(3) ವಿದ್ಯಾರ್ಥಿಗಳು ಮಾಡಬಹುದಾದ ಸಮಾಜ ಸೇವೆ

- o O o -



FirstRanker.com
Firstranker's choice
www.FirstRanker.com